ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

2019-20ರಲ್ಲಿ ರಾಜ್ಯ ಖಜಾನೆಯಲ್ಲಿ ಗದಗ, ಹಾವೇರಿ, ಧಾರವಾಡ ಜಿಲ್ಲೆಗಳ ಬಾಕಿ ಉಳಿದಿರುವ ಅನುದಾನದ ಬಗ್ಗೆ

ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

654 (841) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2019-20ನೇ ಸಾಲಿನಲ್ಲಿ ಕಾರಣಾಂತರಗಳಿಂದ ರಾಜ್ಯ ಖಜಾನೆಯು ಬೇಗ ಮುಚ್ಚಲ್ಪಟ್ಟಿದ್ದರಿಂದ, ಗದಗ, ಹಾವೇರಿ, ಹಾಗೂ ಧಾರವಾಡ ಜಿಲ್ಲೆಗಳ, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳ ಒಟ್ಟು ಎಷ್ಟು ಅನುದಾನ ಬಾಕಿ ಉಳಿದಿದೆ ;

(ಆ) 2019-20ನೇ ಸಾಲಿನಲ್ಲಿ ರಾಜ್ಯ ಖಜಾನೆಯು ನಿಗದಿತ ಸಮಯಕ್ಕಿಂತ ಮೊದಲು ಬಂದ್ ಆಗಲು ಕಾರಣಗಳೇನು ;

(ಇ) ಬಾಕಿ ಉಳಿದಿರುವ ಅನುದಾನ ಪುನಃ ; ಬಿಡುಗಡೆಗೊಳಿಸಲಾಗುವುದೇ ; ಬಾಕಿ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?